# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕೊಪ್ಪಳ.

## ಕೊಪ್ಪಳ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಕ್ಯಾಂಟೀನ್ ನಡೆಸಲು

## ಟೆಂಡರ್ ಅಧಿಸೂಚನೆ ಸಂಖ್ಯೆ: **05/2023**, ದಿನಾಂಕ: **15.11.2023.**

O/W 3229/23

ಈ ಕೆಳಗೆ ಸಹಿ ಮಾಡಿರುವವರು ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನಂದರೆ,

ಕೊಪ್ಪಳ ಜಿಲ್ಲಾ ನ್ಯಾಯಾಲಯ ಆವರಣದಲ್ಲಿರುವ 74.80 ಚದರ ಮೀಟರ್ ವಿಸ್ತೀರ್ಣವುಳ್ಳ ಕಟ್ಟಡವನ್ನು ಮಾತ್ರ ಹೋಟೇಲ್ (ಕ್ಯಾಂಟೀನ್) ನಡೆಸುವ ಉದ್ದೇಶಕ್ಕಾಗಿ ಈ ಕೆಳಗೆ ನಮೂದಿಸಿದ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟು ಗುತ್ತಿಗೆ/ಲೈಸನ್ಸ್ ಆಧಾರದ ಮೇಲೆ ಕೊಡುವುದಿದ್ದು, ಆಸಕ್ತ ಅರ್ಜಿದಾರರಿಂದ ಮೊಹರಾದ ಟೆಂಡರಗಳನ್ನು ಆಹ್ವಾನಿಸಲಾಗಿದೆ.

ನಿಗದಿತ ಟೆಂಡರ್ ನಮೂನೆ ಹಾಗೂ ಇತರೆ ವಿವರಗಳು ಕೊಪ್ಪಳ ಜಿಲ್ಲಾ ನ್ಯಾಯಾಲಯದ ಕಛೇರಿಯಲ್ಲಿ ಹಾಗೂ ವೆಬ್ ಸೈಟ್ **https://districts.ecourts.gov.in/koppal** ನಲ್ಲಿ ಲಭ್ಯವಿರುತ್ತದೆ. ನಿಗದಿತ ಟೆಂಡರ್ ನಮೂನೆ (ಅನುಬಂಧ-1) ಯನ್ನು ಭರ್ತಿಮಾಡಿ ದಿನಾಂಕ: 01.12.2023 ರ ಸಂಜೆ 5.00 ಗಂಟೆಯ ಒಳಗಾಗಿ ಮೊಹರಾದ ಲಕೋಟೆಯಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಕೊಪ್ಪಳ ಇವರ ಕಛೇರಿಗೆ ಸಲ್ಲಿಸತಕ್ಕದ್ದು.

### :: ಷರತ್ತುಗಳು ::

1. ಸದರಿ ಕಟ್ಟಡದಲ್ಲಿ ಸಸ್ಯಾಹಾರಿ ಹೋಟೇಲ್ (ಕ್ಯಾಂಟೀನ್) ನಡೆಸುವ ಉದ್ದೇಶಕ್ಕಾಗಿ ಲೋಕೋಪಯೋಗಿ ಇಲಾಖೆಯ ಅಭಿಯಂತರರು ನಿಗದಿಪಡಿಸಿದಂತೆ ಪ್ರತಿ ತಿಂಗಳ ಕನಿಷ್ಟ ಬಾಡಿಗೆ ದರ ರೂ. 11,000/- ಅಥವಾ ಮೇಲ್ಪಟ್ಟು, ಅತೀ ಹೆಚ್ಚು ಬಾಡಿಗೆ ಪ್ರಸ್ತಾವನೆ ಸಲ್ಲಿಸುವ ಟೆಂಡರ್ ದಾರರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗುವುದು.

2. ಆಸಕ್ತ ಅರ್ಜಿದಾರರು ಟೆಂಡರ್ ದಸ್ತಾವೇಜಿನೊಂದಿಗೆ 10,000/- ರೂಪಾಯಿಗಳ EMD ಮೊಬಲಗನ್ನು Prl. District and Sessions Judge, Koppal ಇವರ ಹೆಸರಿನಲ್ಲಿ ತೆಗೆದ ರಾಷ್ಟ್ರೀಕೃತ ಬ್ಯಾಂಕಿನ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಸಲ್ಲಿಸತಕ್ಕದ್ದು. EMD ರಹಿತ ಟೆಂಡರ್ ದಸ್ತಾವೇಜುಗಳನ್ನು ಟೆಂಡರ್ ಪ್ರಕ್ರಿಯೆಗಾಗಿ ಪರಿಗಣಿಸಲಾಗುವುದಿಲ್ಲ. EMD ಮೊಬಲಗನ್ನು ಟೆಂಡರ್ ಪ್ರಕ್ರಿಯೆಯು ಸಂಪೂರ್ಣವಾಗಿ ಮುಕ್ತಾಯಗೊಂಡ ಬಳಿಕ ಹಿಂದುರುಗಿಸಲಾಗುವುದು.

3. ಯಶಸ್ವಿ ಬಿಡ್ಡುದಾರರು ಗುತ್ತಿಗೆ ನೀಡಿಕೆಯ ಆದೇಶವಾದ 7 ದಿನಗಳ ಒಳಗಾಗಿ ಹೋಟೇಲ್ (ಕ್ಯಾಂಟೀನ್) ಕಾರ್ಯಾಚರಣೆಯನ್ನು ಪ್ರಾರಂಭಿಸತಕ್ಕದ್ದು. ತಪ್ಪಿದಲ್ಲಿ EMD ಮೊಬಲಗನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮಕೈಗೊಳ್ಳಲಾಗುವುದು ಹಾಗೂ 2 ನೇ ಅತೀ ಹೆಚ್ಚಿನ ಬಿಡ್ಡುದಾರರಿಗೆ ಹೋಟೇಲ್ (ಕ್ಯಾಂಟೀನ್) ನಡೆಸಲು ಗುತ್ತಿಗೆ ನೀಡಲಾಗುವುದು.

4. ಸದರಿ ಹೋಟೇಲ್ (ಕ್ಯಾಂಟೀನ್) ನಡೆಸುವವರೇ ಯಶಸ್ವಿ ಬಾಡಿಗೆಯ ಬಿಡ್ ಮೊತ್ತದ ಹತ್ತರಷ್ಟು ಠೇವಣಿಯನ್ನು ಕೊಪ್ಪಳ ಜಿಲ್ಲಾ ನ್ಯಾಯಾಲಯದ ಕಛೇರಿಯಲ್ಲಿ ಪಾವತಿಸತಕ್ಕದ್ದು ಅದನ್ನು ಸಿ.ಸಿ.ಡಿ ಖಾತೆಯಲ್ಲಿ ಇಡತಕ್ಕದ್ದು ಮತ್ತು ಸದರಿ ಹಣಕ್ಕೆಯಾವುದೇ ರೀತಿಯ ಬಡ್ಡಿ ಇರುವುದಿಲ್ಲ, ಗುತ್ತಿಗೆಯ ಅವಧಿ ಮುಗಿದ ನಂತರ ಸುಸ್ಥಿತಿಯಲ್ಲಿ ಕಟ್ಟಡವನ್ನು ಖಾಲಿ ಮಾಡಿದ ನಂತರ ಯಾವುದೇ ಪಾವತಿ ಬಾಕಿ ಇದ್ದಲ್ಲಿ ಅದನ್ನು ಕಡಿತಗೊಳಿಸಿ, ಉಳಿದ ಠೇವಣಿ ಹಣವನ್ನು ಮರಳಿಸಲಾಗುವುದು.

5. ಸದರಿ ಹೋಟೇಲ್ (ಕ್ಯಾಂಟೀನ್) ನಡೆಸುವ ಕುರಿತಂತೆ ಈ ಕೆಳಗೆ ಸಹಿ ಮಾಡಿದವರ ಜೊತೆಯಲ್ಲಿ ನಿಬಂಧನೆಗಳಿಗನುಸಾರವಾಗಿ ಒಪ್ಪಂದ ಪತ್ರ ಮಾಡಿಕೊಳ್ಳತಕ್ಕದ್ದು, ಕಾಲಕಾಲಕ್ಕೆ ಬದಲಾದ ನಿಬಂಧನೆಗಳಿಗೆ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.

6. ಅರ್ಜಿದಾರರು ಹೋಟೇಲ್ ಉದ್ಯಮ ನಡೆಸಲು ಸಂಬಂಧಪಟ್ಟ ಪ್ರಾಧಿಕಾರದವರಿಂದ ಪಡೆದ ಪ್ರಮಾಣ ಪತ್ರ (ಟ್ರೇಡ್ ಲೈಸನ್ಸ್) ಹಾಗೂ ಸಂಬಂಧಿತ ತೆರಿಗೆ ಇಲಾಖೆಯ ನೋಂದಣಿ ಪತ್ರವನ್ನು ಹೊಂದಿರತಕ್ಕದ್ದು ಹಾಗೂ ಟೆಂಡರ್ ದಸ್ತಾವೇಜಿನೊಂದಿಗೆ ಸಲ್ಲಿಸತಕ್ಕದ್ದು ಮತ್ತು ಉದ್ಯಮ ಸ್ಥಳದಲ್ಲಿ ಕಾಣುವಂತೆ ಪ್ರದರ್ಶಿಸತಕ್ಕದ್ದು.

7. ಹೋಟೇಲ್ (ಕ್ಯಾಂಟೀನ್) ನಡೆಸುವ ಗುತ್ತಿಗೆದಾರರು ಪ್ರತಿ ತಿಂಗಳ ಬಾಡಿಗೆಯನ್ನು ತಪ್ಪದೇ ನಿಗದಿತ ದಿನಾಂಕದೊಳಗಾಗಿ ಕೊಪ್ಪಳ ಜಿಲ್ಲಾ ನ್ಯಾಯಾಲಯದ ಕಛೇರಿಯಲ್ಲಿ ಪಾವತಿಸತಕ್ಕದ್ದು, ತಪ್ಪಿದಲ್ಲಿ ಗುತ್ತಿಗೆಯನ್ನು ರದ್ದುಪಡಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಹಾಗೂ ಅವಶ್ಯವಿದ್ದಲ್ಲಿ ಪ್ರತಿ ವರ್ಷ ಸದರಿ ಬಾಡಿಗೆಯ ಶೇಕಡ 10 ರಷ್ಟು ಹೆಚ್ಚಿಸಲಾಗುವುದು.

8. ಗುತ್ತಿಗೆ ಪಡೆಯುವ ಅರ್ಜಿದಾರರ ಇತ್ತೀಚಿನ ಎರಡು ಭಾವಚಿತ್ರಗಳನ್ನು, ಗುರುತುಪತ್ರ ಮತ್ತು ವಿಳಾಸದ ದಾಖಲೆಯನ್ನು ಹಾಜರುಪಡಿಸತಕ್ಕದ್ದು. ಇದೇ ರೀತಿ ಹೋಟೇಲ್ (ಕ್ಯಾಂಟೀನ್)ನಲ್ಲಿ ಕೆಲಸ ಮಾಡುವ ಕೆಲಸಗಾರರ ಗುರುತುಪತ್ರ ಹಾಗೂ ವಿಳಾಸದ ದಾಖಲೆಯನ್ನು ಕೂಡ ಹಾಜರುಪಡಿಸತಕ್ಕದ್ದು.

9. ಹೋಟೇಲ್ (ಕ್ಯಾಂಟೀನ್) ನಲ್ಲಿ ತಯಾರಿಸುವ ಆಹಾರ ಪದಾರ್ಥಗಳ ಪಟ್ಟಿ ಹಾಗೂ ಅವುಗಳ ಪದಾರ್ಥವಾರು ಪ್ರಮಾಣ ಹಾಗೂ ದರಗಳ ಪಟ್ಟಿಯನ್ನು ಟೆಂಡರ್ ದಸ್ತಾವೇಜಿನೊಂದಿಗೆ ಅನುಬಂಧ-2 ರಲ್ಲಿ ಸಲ್ಲಿಸತಕ್ಕದ್ದು, ಯಶಸ್ವಿ ಬಿಡ್ಡುದಾರರು ಟೆಂಡರ್ ದಸ್ತಾವೇಜಿನೊಂದಿಗೆ ಸಲ್ಲಿಸಿದ/ ಪ್ರಧಾನ ಜಿಲ್ಲಾ ನ್ಯಾಯಾಧೀಶರಿಂದ ಅನುಮೋದಿಸಲ್ಪಟ್ಟ ದರಪಟ್ಟಿಯ ಪ್ರಕಾರವೇ ಆಹಾರ ಪದಾರ್ಥಗಳನ್ನು ಗ್ರಾಹಕರಿಗೆ ಸರಬರಾಜು ಮಾಡತಕ್ಕದ್ದು ಹಾಗೂ ಆಹಾರ ಪದಾರ್ಥಗಳ ದರಗಳನ್ನು ಪರಿಷ್ಕರಿಸುವ ಮುಂಚೆ ಪ್ರಧಾನ ಜಿಲ್ಲಾ ನ್ಯಾಯಾಧೀಶರ ಲಿಖಿತ ಪರವಾನಗಿ ಪಡೆಯತಕ್ಕದ್ದು.

10. ಸದರಿ ಹೋಟೇಲ್ (ಕ್ಯಾಂಟೀನ್) ನಲ್ಲಿ ತಯಾರಿಸುವ ಅಥವಾ ಮಾರಾಟ ಮಾಡುವ ಎಲ್ಲಾ ಆಹಾರ ಪದಾರ್ಥಗಳು ಸ್ವಚ್ಛ ಮತ್ತು ಆರೋಗ್ಯಪೂರ್ಣವಾಗಿರತಕ್ಕದ್ದು ಹಾಗೂಆಹಾರ ಪದಾರ್ಥಗಳ ತಯಾರಿಕೆಗಾಗಿ ಉತ್ತಮ ಗುಣಮಟ್ಟದ ತರಕಾರಿ, ದಾನ್ಯಗಳು ಹಾಗೂ ಖಾದ್ಯತೈಲವನ್ನು ಮಾತ್ರ ಉಪಯೋಗಿಸತಕ್ಕದ್ದು, ಅಲ್ಲದೇ ಕೇವಲ ಸಸ್ಯಾಹಾರಿ ಆಹಾರ ಪದಾರ್ಥಗಳನ್ನು ಮಾತ್ರ ತಯಾರಿ ಅಥವಾ ಮಾರಾಟ ಮಾಡತಕ್ಕದ್ದು, ತಪ್ಪಿದಲ್ಲಿ ಗುತ್ತಿಗೆಯನ್ನು ರದ್ದುಪಡಿಸಲಾಗುವುದು ಮತ್ತು ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲು ಶಿಫಾರಸ್ಸು ಮಾಡಲಾಗುವುದು.

11. ಲೈಸನ್ಸ್ ನೀಡಿಕೆ ಪ್ರಾಧಿಕಾರವು ಸದರಿ ಹೋಟೇಲ್ (ಕ್ಯಾಂಟೀನ್) ನಲ್ಲಿ ತಯಾರಿಸುವ ಅಥವಾ ಮಾರಾಟ ಮಾಡುವ ಎಲ್ಲಾ ಆಹಾರ ಪದಾರ್ಥಗಳನ್ನು ಗುಣಮಟ್ಟ ಹಾಗೂ ಪ್ರಮಾಣವನ್ನು ಯಾವಾಗ ಬೇಕಾದರೂ ಪರೀಕ್ಷಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಸದರಿ ಹೋಟೇಲ್ (ಕ್ಯಾಂಟೀನ್) ನಲ್ಲಿ ತಯಾರಿಸಲಾದ ಆಹಾರ ಪದಾರ್ಥಗಳನ್ನು ಸದ್ರಿ ಹೋಟೇಲ್ (ಕ್ಯಾಂಟೀನ್) ಆವರಣದಲ್ಲಿ ಮಾತ್ರ ಮಾರಾಟ ಮಾಡತಕ್ಕದ್ದು.

12. ವಿದ್ಯುತ್ ಬಿಲ್ಲು, ನೀರಿನ ಕರ ಹಾಗೂ ಸ್ವಚ್ಛತೆಗೆ ಸಂಬಂಧಿಸಿ ತಗಲುವ ಖರ್ಚನ್ನು ಮತ್ತು ಇನ್ನಿತರೆ ಯಾವುದೇ ಖರ್ಚನ್ನು ಗುತ್ತಿಗೆದಾರರೇ ಭರಿಸತಕ್ಕದ್ದು. ಗುತ್ತಿಗೆದಾರರು, ಕೊಪ್ಪಳ ನಗರಸಭೆ ವತಿಯಿಂದ ಜಾರಿಮಾಡಿರುವ ಕಸ/ತ್ಯಾಜ್ಯ ವಿಲೇವಾರಿ ಪದ್ದತಿಯನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳತಕ್ಕದ್ದು.

13. ಗುತ್ತಿಗೆದಾರರು ಸದರಿ ಹೋಟೇಲ್ (ಕ್ಯಾಂಟೀನ್) ಉದ್ಯಮವನ್ನು ಬೆಳಿಗ್ಗೆ 7.00 ಗಂಟೆಯಿಂದ ಸಾಯಂಕಾಲ 7.00 ಗಂಟೆಯವರೆಗೆ ಮಾತ್ರ ನಡೆಸತಕ್ಕದ್ದು.

14. ಈಗಿರುವ ಹೋಟೇಲ್ ಕಟ್ಟಡದಲ್ಲಿ ಯಾವುದೇ ಮಾರ್ಪಾಡು/ ಹೊಸ ಜೋಡಣೆಯನ್ನು ಮಾಡತಕ್ಕದ್ದಲ್ಲ. ಒಂದು ವೇಳೆ ಮಾರ್ಪಾಡು/ ಹೊಸ ಜೋಡಣೆ ಮಾಡುವ ಪ್ರಸಂಗ ಬಂದಲ್ಲಿ ಪ್ರಧಾನ ಜಿಲ್ಲಾ ನ್ಯಾಯಾಧೀಶರಿಂದ ಲಿಖಿತ ಪೂರ್ವಾನುಮತಿ ಪಡೆಯತಕ್ಕದ್ದು. ಪೂರ್ವಾನುಮತಿ ಇಲ್ಲದೇ ಮಾರ್ಪಾಡು / ಹೊಸ ಜೋಡಣೆ ಮಾಡಿದಲ್ಲಿ ಗುತ್ತಿಗೆ ರದ್ದುಪಡಿಸಲಾಗುವುದು ಮತ್ತು ಅಂತವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು.

15. ಸದರಿ ಕಟ್ಟಡದ ಅವಶ್ಯಕತೆ ಜಿಲ್ಲಾ ನ್ಯಾಯಾಂಗಕ್ಕೆ ಕಂಡುಬಂದಲ್ಲಿ ಗುತ್ತಿಗೆದಾರರು ಕಟ್ಟಡವನ್ನು ನೋಟೀಸ್ ಪಡೆದ 15 ದಿನಗಳೊಳಗಾಗಿ ತೆರವು ಮಾಡಬೇಕು. ಗುತ್ತಿಗೆದಾರರಿಗೆ ಈ ಬಗ್ಗೆ ಯಾವುದೇ ರೀತಿಯ ಪರಿಹಾರ ನೀಡಲಾಗುವುದಿಲ್ಲ.

16. ಸದರಿ ಹೋಟೇಲ್ (ಕ್ಯಾಂಟೀನ್) ಕಟ್ಟಡದಲ್ಲಿ ಆರೋಗ್ಯಕ್ಕೆ ಹಾನಿಕರವಾದ ವಸ್ತುಗಳು, ಗುಟ್ಕಾ, ಸಿಗರೇಟ್, ಮಾದಕದ್ರವ್ಯ, ಮಾದಕ ಪಾನೀಯ ಹಾಗೂ ಇತರೆ ಯಾವುದೇ ಅನಪೇಕ್ಷಿತ ವಸ್ತುಗಳನ್ನು ಸಂಗ್ರಹಿಸಿ ಇಡತಕ್ಕದ್ದಲ್ಲ. ಮತ್ತು ಮಾರಾಟ ಮಾಡತಕ್ಕದ್ದಲ್ಲ. ಸದರಿ ಕಟ್ಟಡವನ್ನು ಹೋಟೇಲ್ (ಕ್ಯಾಂಟೀನ್) ಉಪಯೋಗಕ್ಕೆ ಹೊರತುಪಡಿಸಿ ಬೇರೆ ಯಾವುದೇ ವ್ಯವಹಾರಗಳಿಗೆ ಮತ್ತು ಕಾನೂನು ಬಾಹಿರ ಚಟುವಟಿಕೆಗಳಿಗೆ ಬಳಸಿಕೊಳ್ಳತಕ್ಕದ್ದಲ್ಲ, ಒಂದು ವೇಳೆ ಬೇರೆ ಯಾವುದೇ ಉದ್ಯೋಗಕ್ಕೆ / ಉದ್ದೇಶಕ್ಕೆ ಬಳಸಿಕೊಂಡಿದ್ದು ಕಂಡು ಬಂದಲ್ಲಿ ಸದರಿ ಗುತ್ತಿಗೆಯನ್ನು ರದ್ದುಪಡಿಸಲಾಗುವುದು.

17. ಸದರಿ ಹೋಟೇಲ್ ಉದ್ಯಮವು ನ್ಯಾಯಾಲಯದ ಯಾವುದೇ ಕಾರ್ಯಕಲಾಪಗಳಿಗೆ, ಕಕ್ಷಿದಾರರಿಗೆ, ನ್ಯಾಯವಾದಿಗಳಿಗೆ, ನ್ಯಾಯಾಲಯದ ಸಿಬ್ಬಂದಿಯವರಿಗೆ ಹಾಗೂ ವಾಹನಗಳ ಚಲನವಲನಕ್ಕೆ ತೊಂದರೆಯಾಗದಂತೆ ನೋಡಿತಕ್ಕದ್ದು.

18. ಸದರಿ ಹೋಟೇಲ್ (ಕ್ಯಾಂಟೀನ್) ಕಟ್ಟಡವನ್ನು ಮತ್ತು ಪರಿಸರವನ್ನು ಯಾವತ್ತೂ ಸ್ವಚ್ಛವಾಗಿ ಇಡತಕ್ಕದ್ದು. ಅಲ್ಲದೆ ಅಲ್ಲಿ ಉಪಯೋಗಿಸುವ ಪಾತ್ರೆ ಮತ್ತು ಇತರ ಅಡುಗೆ ಪರಿಕರಗಳನ್ನು ಸ್ವಚ್ಛ ಹಾಗೂ ಆರೋಗ್ಯ ಪೂರ್ಣವಾಗಿರುವಂತೆ ನೋಡಿಕೊಳ್ಳತಕ್ಕದ್ದು.

19. ಹೋಟೇಲ್ (ಕ್ಯಾಂಟೀನ್) ಕಟ್ಟಡಕ್ಕೆ ಹಾಗೂ ಕಟ್ಟಡದಲ್ಲಿ ಅಳವಡಿಸಿರುವ ವಿದ್ಯುತ್ ಉಪಕರಣಗಳು ಪೀಠೋಪಕರಣಗಳು ಹಾಗೂ ಇತರೆ ಅಳವಡಿಕೆಗಳಿಗೆ ಹಾನಿ ಸಂಭವಿಸಿದ್ದಲ್ಲಿ ಗುತ್ತಿಗೆದಾರರೇ ಜವಾಬ್ದಾರಿಯಾಗಿರುತ್ತಾರೆ.

20. ಸದರಿ ಹೋಟೇಲ್ (ಕ್ಯಾಂಟೀನ್) ಕಟ್ಟಡವನ್ನು ಅಧಿಕೃತ ಗುತ್ತಿಗೆದಾರರು ಬೇರೆ ಯಾರಿಗೂ ಬಾಡಿಗೆ / ಗುತ್ತಿಗೆ ಅಥವಾ ಇನ್ನಾವುದೇ ರೂಪದಲ್ಲಿ ಪರಭಾರೆ ಮಾಡತಕ್ಕದ್ದಲ್ಲ. ಗುತ್ತಿಗೆದಾರರು ಹೋಟೇಲ್ (ಕ್ಯಾಂಟೀನ್) ನಡೆಸಲು ಯಾವುದೇ ಕಾರಣಕ್ಕೂ ಬಾಲಕಾರ್ಮಿಕರನ್ನು ನೇಮಿಸಿಕೊಳ್ಳುವಂತಿಲ್ಲ.

21. ಗುತ್ತಿಗೆದಾರರು ತಮ್ಮ ಪರವಾನಿಗೆ ಪತ್ರ (ಲೈಸನ್ಸ್) ವನ್ನು ಕೇಳಿದಾಗ ತೋರಿಸತಕ್ಕದ್ದು. ಲೈಸನ್ಸ್ ಪಡೆದ ಗುತ್ತಿಗೆದಾರರು ಮಾತ್ರ ಈ ಉದ್ಯಮವನ್ನು ನಡೆಸಲು ಅರ್ಹರಾಗಿರುತ್ತಾರೆ.

22. ಸದರಿ ಕಟ್ಟಡದ ಗುತ್ತಿಗೆ ಅವಧಿಯು ಮೂರು ವರ್ಷಗಳಾಗಿದ್ದು. ಒಂದು ವೇಳೆ ಷರುತ್ತಗಳ ಉಲ್ಲಂಘನೆ, ವಕೀಲರಿಂದ ಅಥವಾ ನ್ಯಾಯಾಧೀಶರುಗಳಿಂದ ಮತ್ತು ಸಿಬ್ಬಂದಿಗಳಿಂದ ದೂರುಗಳು ಬಂದರೆ ಅವುಗಳನ್ನು ಪರಿಶೀಲಿಸಿ ಗುತ್ತಿಗೆಯನ್ನು ರದ್ದುಪಡಿಸು ಕ್ರಮಕೈಗೊಳ್ಳಲಾಗುವುದು. ಸದರಿ ಗುತ್ತಿಗೆ ಅವಧಿ ಮುಗಿದ ಮೇಲೆ ಅಥವಾ ಮಧ್ಯದಲ್ಲಿಯೇ ರದ್ದಾದರೆ 15 ದಿನಗಳ ಒಳಗಾಗಿ ಸದರಿ ಕಟ್ಟಡವನ್ನು ಖಾಲಿ ಮಾಡತಕ್ಕದ್ದು.

23. ಆಸಕ್ತ ಅರ್ಜಿದಾರರು ಮೇಲಿನ ಎಲ್ಲಾ ನಿಬಂಧನೆಗಳಿಗೆ ಒಳಪಟ್ಟು, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೊಪ್ಪಳ ಇವರಿಗೆ ಟೆಂಡರ್ ಪ್ರಸ್ತಾವನೆಯನ್ನು ಮೊಹರಾದ ಲಕೋಟೆಯಲ್ಲಿ ಅನುಬಂಧ-1 ರಲ್ಲಿ ದಿನಾಂಕ: 01.12.2022 ರಂದು ಸಂಜೆ 5.00 ಗಂಟೆಗೆ ಒಳಗಾಗಿ

ಸಲ್ಲಿಸತಕ್ಕದ್ದು. ಲಕೋಟೆಯ ಮೇಲೆ **Tender for Running Hotel/Canteen at Koppal** ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.

24. ಮೊಹರಾದ ಟೆಂಡರ್ ಗಳನ್ನು ದಿನಾಂಕಃ 01.12.2023 ರಂದು ಸಂಜೆ 5.30 ಕ್ಕೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೊಪ್ಪಳ ಇವರ ಚೇಂಬರ್ ನಲ್ಲಿ ಹಾಜರಿರುವ ಟೆಂಡರ್ ದಾರರ ಸಮಕ್ಷಮದಲ್ಲಿ ತೆರೆಯಲಾಗುವುದು ಮತ್ತು ಬಾಡಿಗೆಯ ಪ್ರಸ್ತಾವನೆ ಇರುವ ಟೆಂಡರ್ ನ್ನು ಸ್ವೀಕರಿಸುವ ಅಧಿಕಾರ ಪ್ರಧಾನ ಜಿಲ್ಲಾ ನ್ಯಾಯಾಧೀಶರು ಹೊಂದಿರುತ್ತಾರೆ.

25. ಈ ಕೆಳಗೆ ಸಹಿ ಮಾಡಿದವರು ಯಾವುದೇ ಕಾರಣವನ್ನು ನೀಡದೇ ಟೆಂಡರ್ ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಾಗೂ ಟೆಂಡರ್ ಪ್ರಕ್ರಿಯೆಯನ್ನು ರದ್ದು ಪಡಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕಃ **01.12.2023** ರಂದು ಸಂಜೆ **5.00** ಗಂಟೆಯವರೆಗೆ ಅದೇ ದಿನ ಸಂಜೆ **5.30** ಕ್ಕೆ ಟೆಂಡರಗಳನ್ನು ತೆರೆಯಲಾಗುವುದು.

ಈ ಟೆಂಡರ್ ಪ್ರಕ್ರಿಯೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೆಲಸದ ವೇಳೆಯಲ್ಲಿ ಕೊಪ್ಪಳ ಜಿಲ್ಲಾ ನ್ಯಾಯಾಲಯದ ಮುಖ್ಯ ಆಡಳಿತಾಧಿಕಾರಿಯವರನ್ನು ಸಂಪರ್ಕಿಸಿ ಪಡೆಯಬಹುದು.

15/11/23

( ಚಂದ್ರ ಶೇಖರ್. ಸಿ. )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಪ್ಪಳ.

ಪ್ರತಿಯನ್ನು ಪ್ರಚಾರಕ್ಕಾಗಿ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವ ಕೋರಿಕೆಯೊಂದಿಗೆ ಕಳುಹಿಸಲಾಗಿದೆ.

1) ಜಿಲ್ಲಾ ವಾರ್ತಾಧಿಕಾರಿಗಳು, ವಾರ್ತಾ ಮತ್ತು ಪ್ರಚಾರ ಇಲಾಖೆ ಕೊಪ್ಪಳ ಇವರಿಗೆ ದಿನಪತ್ರಿಕೆಗಳಲ್ಲಿ ಉಚಿತವಾಗಿ ಪ್ರಕಟಿಸಲು ಕೋರಿದೆ.
2) ಪ್ರಧಾನ ನ್ಯಾಯಾಧೀಶರು, ಕೌಟುಂಬಿಕ ನ್ಯಾಯಾಲಯ, ಕೊಪ್ಪಳ.
3) ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಎಫ್.ಟಿ.ಎಸ್.ಸಿ.-1, ಕೊಪ್ಪಳ.
4) ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕೊಪ್ಪಳ.
5) ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು, ಕೊಪ್ಪಳ.
6)ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕೊಪ್ಪಳ.
7) ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕೊಪ್ಪಳ
8) ಜಿಲ್ಲಾಧಿಕಾರಿಗಳು, ಕೊಪ್ಪಳ.
9)ಉಪವಿಭಾಗಾಧಿಕಾರಿಗಳು, ಕೊಪ್ಪಳ
10) ತಹಶೀಲ್ದಾರರು, ಕೊಪ್ಪಳ
11) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕೊಪ್ಪಳ.
12) ಆಯುಕತರು, ನಗರ ಸಭೆ, ಕೊಪ್ಪಳ.
13) ಅಧ್ಯಕ್ಷರು, ಕೊಪ್ಪಳ ಜಿಲ್ಲಾ ವಕೀಲರ ಸಂಘ, ಕೊಪ್ಪಳ .
14)ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ಕೊಪ್ಪಳ
15)ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಪ-ವಿಭಾಗ, ಕೊಪ್ಪಳ
16) ಸಾಫ್ಟ್ ವೇರ್ ಟೆಕ್ನಿಶೀಯನ್, ಜಿಲ್ಲಾ ನ್ಯಾಯಾಲಯ (ಜಿಲ್ಲಾ ನ್ಯಾಯಾಲಯದ ವೆಬ್ ಸೈಟ್‌ನಲ್ಲಿ ಪ್ರಕಟಣೆಗಾಗಿ)
17) ಈ ನ್ಯಾಯಾಲಯದ ಲೆಕ್ಕ ವಿಭಾಗದ ಶಿರಸ್ತೇದಾರರು
18) ಕಛೇರಿ ಸೂಚನಾ ಫಲಕಕ್ಕೆ

|| COPY ||

ಮುಖ್ಯ ಆಡಳಿತಾಧಿಕಾರಿಗಳು
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಕೊಪ್ಪಳ.

# ಅನುಬಂಧ-1

ಇವರಿಗೆ:

ಪ್ರಧಾನ ಜಿಲ್ಲಾ ಮತ್ತು ನ್ಯಾಯಾಧೀಶರು,
ಕೊಪ್ಪಳ.

ಮಾನ್ಯರೇ,

ವಿಷಯ: ಕೊಪ್ಪಳ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಹೋಟೇಲ್ (ಕ್ಯಾಂಟೀನ್) ನಡೆಸಲು ಟೆಂಡರ್ ಸಲ್ಲಿಸುವ ಬಗ್ಗೆ.

ಉಲ್ಲೇಖ: ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಕೊಪ್ಪಳ, ಟೆಂಡರ್ ಪ್ರಕಟಣೆ ಸಂಖ್ಯೆ: 05/2023, ದಿನಾಂಕ: 15.11.2023

ಈ ಕೆಳಗೆ ಸಹಿ ಮಾಡಿರುವ ಶ್ರೀಮತಿ/ಶ್ರೀ ______________________________ ______________________________ ಆದ ನಾನು /ನಾವು ಉಲ್ಲೇಖಿತ ಟೆಂಡರ್ ಪ್ರಕಟಣೆಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟು ಕೊಪ್ಪಳ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ಹೋಟೇಲ್ (ಕ್ಯಾಂಟೀನ್) ನಡೆಸಲು ಆಸಕ್ತರಿದ್ದು, ಈ ಮೂಲಕ ಈ ಕೆಳಗಿನ ವಿವರಗಳೊಂದಿಗೆ ಟೆಂಡರ್ ಸಲ್ಲಿಸುತ್ತಿದ್ದೇನೆ/ವೆ ಮತ್ತು ಕ್ಯಾಂಟೀನ್ ನಡೆಸುವ ಬಗ್ಗೆ ಕರಾರನ್ನು ಮಾಡಿಕೊಳ್ಳಲು ಒಪ್ಪಿರುತ್ತೇನೆ/ವೆ.

| | | | |
|---|---|---|---|
| 1. | ಟೆಂಡರುದಾರರ ಹೆಸರು | : | |
| 2. | ಪೂರ್ಣ ವಿಳಾಸ | : | |
| | ಅ) ಮೊಬೈಲ್ ಸಂಖ್ಯೆ | : | |
| | ಆ) ಇ-ಮೇಲ್ ವಿಳಾಸ | : | |
| 3. | EMD ಮೊಬಲಗಿನ ಬಗ್ಗೆ ಡಿಮ್ಯಾಂಡ್ ಡ್ರಾಫ್ಟ್ ನ ಮೊತ್ತ ಸಂಖ್ಯೆ ಹಾಗೂ ದಿನಾಂಕ | : | |
| 4. | ಈ ಟೆಂಡರ್ ಪ್ರಕ್ರಿಯೆಗೆ ಉಲ್ಲೇಖಿಸುವ ಪ್ರತಿ ತಿಂಗಳ ಬಾಡಿಗೆ ದರ | : | |
| 5. | ಈ ಹಿಂದೆ ಸದರಿ ಹೋಟೇಲ್ (ಕ್ಯಾಂಟೀನ್) ನಡೆಸಿದ್ದೀರಾ | : | |
| 6. | ಉದ್ಯಮ ಪರವಾನಿಗೆ ವಿವರಗಳು (ಪ್ರತಿಗಳನ್ನು ಲಗತ್ತಿಸುವುದು) | : | |
| | ಅ) ರಿಜಿಸ್ಟ್ರೇಷನ್ ನಂ. | : | |
| | ಆ) ಪ್ಯಾನ್ ನಂ. | : | |
| | ಇ) ಪ್ರಾವಿಡೆಂಟ್ ಫಂಡ್ ರಿಜಿಸ್ಟ್ರೇಷನ್ ನಂ. | : | |
| | ಈ) ಇಎಸ್ಐ ರಿಜಿಸ್ಟ್ರೇಷನ್ ನಂ. | : | |
| | ಉ) ಜಿ.ಎಸ್.ಟಿ. ರಿಜಿಸ್ಟ್ರೇಷನ್ ನಂ. | : | |

ಸ್ಥಳ
ದಿನಾಂಕ:

ಟೆಂಡರುದಾರರ ಹೆಸರು ಹಾಗೂ ಸಹಿ ಮೊಹರಿನೊಂದಿಗೆ

ಅನುಬಂಧ-2

ಕೊಪ್ಪಳ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ಕ್ಯಾಂಟೀನ್‌ಗೆ ಆಹಾರ ಪದಾರ್ಥಗಳ ಪ್ರಸ್ತಾವಿತ ದರಪಟ್ಟಿ
(ಮಾದರಿ)

| ಕ್ರ. ಸಂ. | ತಿಂಡಿ/ಪಾನಿಯಗಳ ಹೆಸರು | ಪ್ರಮಾಣ (ml & gm) ಮತ್ತು ದರ | | ಕ್ರ. ಸಂ. | ತಿಂಡಿ/ಪಾನಿಯಗಳ ಹೆಸರು | ಪ್ರಮಾಣ (ml & gm) ಮತ್ತು ದರ | |
|---|---|---|---|---|---|---|---|
| | | ಪ್ರಮಾಣ | ದರ | | | ಪ್ರಮಾಣ | ದರ |
| 1 | ಟೀ | | | 32 | ಮೈಸೂರು ಮಂಡಕ್ಕಿ | | |
| 2 | ಸ್ಪೆಷಲ್ ಟೀ | | | 33 | ವಗ್ಗರಣೆ | | |
| 3 | ಕಾಫಿ | | | 34 | ಮಿರ್ಚಿ | | |
| 4 | ಹಾಲು | | | 35 | ಗಿರ್ಮಿಟ್ | | |
| 5 | ಬಿಸಿ ಬಾದಾಮಿ ಹಾಲು | | | 36 | ಬ್ರೆಡ್ ಜಾಮ್ | | |
| 6 | ಬೋರ್ನ್‌ವಿಟಾ/ಬೂಸ್ಟ್ | | | 37 | ಸ್ಯಾಂಡ್ ವಿಚ್ | | |
| 7 | ಬಾದಾಮಿ ಹಾಲು | | | 38 | ಬದನೆಕಾಯಿ ಬೊಂಡಾ | | |
| 8 | ಬಟ್ಟರ್ ಮಿಲ್ಕ್/ ಮಜ್ಜಿಗೆ | | | 39 | ಪಲಾವ್ | | |
| 9 | ಲೆಮನ್ ಜ್ಯೂಸ್ | | | 40 | ಪೂರಿ (2) ಕುರ್ಮ/ಪಲ್ಯ | | |
| 10 | ಪೈನಾಪಲ್ ಜ್ಯೂಸ್ | | | 41 | ಚಪಾತಿ ಊಟ | | |
| 11 | ಕಲ್ಲಂಗಡಿ ಜ್ಯೂಸ್ | | | 42 | ಪರೋಟಾ | | |
| 12 | ದಾಳಿಂಬೆ ಜ್ಯೂಸ್ | | | 43 | ಮೊಸರು ಅವಲಕ್ಕಿ | | |
| 13 | ಆರೆಂಜ್ ಜ್ಯೂಸ್ | | | 44 | ಸೇವಿಗೆ ಬಾತ್ | | |
| 14 | ಮ್ಯಾಂಗೋ ಜ್ಯೂಸ್ | | | 45 | ಪ್ಲೇನ್ ದೋಸೆ | | |
| 15 | ಗೋಲಿ ಬಜೆ | | | 46 | ಮಸಾಲೆ ದೋಸೆ | | |
| 16 | ಈರುಳ್ಳಿ ಪಕೋಡಾ | | | 47 | ಸೆಟ್ ದೋಸೆ | | |
| 17 | ಸಮೋಸಾ/ಕಟ್ಲೇಟ್ | | | 48 | ರವಾ ದೋಸೆ | | |
| 18 | ಆಲೂ ಬೊಂಡಾ (1) | | | 49 | ರಾಗಿ ದೋಸೆ | | |
| 19 | ಅಂಬೊಡೆ (1) | | | 50 | ಖಾಲಿ ದೋಸೆ | | |
| 20 | ರವಾ ಇಡ್ಲಿ | | | 51 | ತುಪ್ಪ ದೋಸೆ | | |
| 21 | ಇಡ್ಲಿ , ವಡಾ (2+1) | | | 52 | ಆನಿಯನ್ ಉತ್ತಪ್ಪ | | |
| 22 | ಇಡ್ಲಿ (2) | | | 53 | ಟೋಮ್ಯಾಟೊ ಬಾತ್ | | |
| 23 | ವಡಾ (1) | | | 54 | ರೈಸ್ ಬಾತ್ | | |
| 24 | ಕೇಸರಿ ಬಾತ್ | | | 55 | ಪುಳಿಯೋಗರೆ | | |
| 25 | ಉಪ್ಪಿಟ್ಟು | | | 56 | ಚಿತ್ರಾನ್ನ | | |
| 26 | ಚೌಚೌ ಬಾತ್ | | | 57 | ಮಸಾಲಾ ರೈಸ್ | | |
| 27 | ವಡಾಪಾವ್ | | | 58 | ಮೊಸರನ್ನ | | |
| 28 | ಬ್ರೆಡ್ ಬೊಂಡಾ | | | 59 | ಕ್ಯಾರೇಟ್ ಹಲ್ವಾ | | |
| 29 | ದಹಿವಡಾ (1) | | | 60 | ಗುಲಾಬ್ ಜಾಮೂನ್ | | |
| 30 | ಬನ್ಸ್ (1) | | | 61 | ಜೋಳದ ರೊಟ್ಟಿ ಊಟ | | |
| 31 | ಕಾರ ಮಂಡಾಳ | | | 62 | ಜೀರಾ ರೈಸ್ | | |